

ಕುಸುಮಶ್ರೇಷ್ಠಿಯು 18 ಪಟ್ಟಣಗಳ ವೈಶ್ಯಪ್ರಮುಖರನ್ನು ಆಹ್ವಾನಿಸಿ ಚಕ್ರವರ್ತಿಯ ವಾಂಛೆಯನ್ನು ವಿವರಿಸಲು 102 ಗೋತ್ರಜರು ಕನ್ಯಕೆಯನ್ನು ಕೊಡಲು ನಿರಾಕರಿಸುವುದು. 612 ಗೋತ್ರಜರು ಸಭಾತ್ಯಾಗ ಮಾಡುವುದು.

ಓಂ ಹ್ರೀಂ ಶ್ರೀಂ

# ಶ್ರೀವಾಸವೀದೇವೀ ಕನ್ಯಕಾ ಪುರಾಣ

## ಏಕಾದಶಾಧ್ಯಯಃ

ವಿಷ್ಣುವರ್ಧನ ರಾಜನು ತನ್ನ ಪಟ್ಟಣಕ್ಕೆ ಹಿಂದಿರುಗಿ ಹೋದ ಬಳಿಕ ವೈಶ್ಯಪ್ರಭುವಾದ ಕುಸುಮಶ್ರೇಷ್ಠಿಯು ಕುಲಗುರುವಾದ ಭಾಸ್ಕರಾಚಾರ್ಯರು, ಧನದಾರ್ಯಾದಿ ಮಂತ್ರಿವರರು ಸಮಾವಿಷ್ಟರಾಗಿ ತಮ್ಮ ಕರ್ತವ್ಯವನ್ನು ಕುರಿತು ಚರ್ಚಿಸಿದರು. ಅನಂತರ ಭಾಸ್ಕರಾಚಾರ್ಯರು, "ಅತ್ಯಂತ ಅವಶ್ಯಕವಾದ ಕಾರ್ಯವಿರುವುದರಿಂದ ನನ್ನ ಆಜ್ಞೆಗೆ ಪ್ರತ್ಯುತ್ತರಗಳನ್ನು ಹೇಳದೆ, ತಕ್ಷಣವೇ ಹೊರಟು ಬರಬೇಕಾಗಿದೆ", ಎಂದು ತಿಳಿಸುತ್ತಾ ಪತ್ರಗಳನ್ನು ಬರೆಸಿ 18 ಪಟ್ಟಣಗಳಲ್ಲಿರುವ ವೈಶ್ಯರೆಲ್ಲರಿಗೂ ದೂತರ ಮುಖೇನ ಶೀಘ್ರವಾಗಿ

ಕಳಿಸಿರಿ', ಎಂದು ಕುಸುಮಶ್ರೇಷ್ಠಿಗೆ ಹೇಳಿದರು. ನಂತರ ಗುರುವಾಕ್ಯವನ್ನು ಕೇಳಿ ಕುಸುಮಾರ್ಯನು ಅದೇ ರೀತಿಯಲ್ಲಿ ಕಳಿಸಿದನು. ರಾಜದೂತರು ತ್ವರಿತಗತಿಯಲ್ಲಿ ಹೋಗಿ ಪತ್ರಿಕೆಗಳನ್ನು ಕೊಟ್ಟು ಹಿಂದಿರುಗಿದರು. 18 ಪಟ್ಟಣಗಳ ವೈಶ್ಯರು ದೂತರ ವಚನಗಳನ್ನು ಕೇಳಿ ಪತ್ರಿಕೆಯಲ್ಲಿ ಬರೆಯಲ್ಪಟ್ಟ ಅರ್ಥಗಳನ್ನು ಕಂಡು ಅತ್ಯಾಶ್ಚರ್ಯಪಟ್ಟರು. ತೇಜೋವಂತರೂ, ಪಟ್ಟಣವಾಸಿಗಳೂ ಆದ ಸರ್ವವೈಶ್ಯರೂ ಆಲೋಚಿಸಿ ಪ್ರಯಾಣ ಹೊರಟು ಪೆನುಗೊಂಡೆಯನ್ನು ಸೇರಿದರು.

**ಅಷ್ಟಾದಶ ಪಟ್ಟಣಗಳ ಆರ್ಯವೈಶ್ಯಪ್ರಮುಖರ ಮಹಾಸಮಾವೇಶ ಮತ್ತು ಚರ್ಚೆ:**

ಅವರ ಆಗಮನ ತಿಳಿದು ರಾಜನಾದ ಕುಸುಮಶ್ರೇಷ್ಠಿ ತನ್ನ ಪರಿವಾರಸಮೇತನಾಗಿ 18 ಪಟ್ಟಣಗಳಿಂದ ಬಂದ ವೈಶ್ಯವರ್ಯರನ್ನು ಎದುರ್ಗೊಂಡು ಆಹ್ವಾನಿಸಿ ಕರೆತಂದನು. ಅವರಿಗೆ ಸಮುಚಿತ ವಸತಿ, ಭೋಜನ, ಸೌಕರ್ಯಗಳನ್ನು ಏರ್ಪಡಿಸಿ ಸತ್ಕರಿಸಿದನು. ಮಾರನೆಯ ದಿನ ವೈಶ್ಯನಗರಳಿಂದ ಆಗಮಿಸಿದ 714 ಗೋತ್ರಗಳ ಸಮಸ್ತ ವೈಶ್ಯ ಪ್ರತಿನಿಧಿಗಳು ನಗರೇಶ್ವರ ದೇವಾಲಯ ಪ್ರಾಂಗಣದಲ್ಲಿ ಸಮಾವಿಷ್ಟರಾದರು. ನಂತರ ಕುಸುಮಾರ್ಯ ರಾಜೇಂದ್ರನು ಗುರುವಿನ ಆಣತಿಯಂತೆ ನಡೆದ ವಿಷಯಗಳನ್ನೆಲ್ಲಾ ಸಭಾಸದರಿಗೆ ಸವಿಸ್ತಾರವಾಗಿ ತಿಳಿಸಿಕೊಟ್ಟು, 'ಆತ್ಮೀಯರೇ ! ಈ ಸಮಸ್ಯಾಪರಿಷ್ಕಾರಕ್ಕೆ ಚೆನ್ನಾಗಿ ಆಲೋಚಿಸಿ, ಚರ್ಚಿಸಿ ಕರ್ತವ್ಯವನ್ನು ಪ್ರಬೋಧಿಸಿರಿ' ಎಂದು ಪ್ರಾರ್ಥಿಸಿದನು. ನರೇಂದ್ರನ ಮಾತುಗಳನ್ನು ಕೇಳಿ ವೈಶ್ಯ ಪ್ರಮುಖರೆಲ್ಲರೂ ಚಿಂತಾಕ್ರಾಂತರಾದರು.

ಅನಂತರ ಕೆಲವು ನಗರಸ್ವಾಮಿಗಳು ಸಭೆಯನ್ನು ಉದ್ದೇಶಿಸಿ, 'ಸಭಾಸದರೇ ! ವಿಷ್ಣುವರ್ಧನ ಭೂಪಾಲನೊಡನೆ ಸಂಬಂಧವು ಅಸಂಭವವಾದ ವಿಷಯ. ನಮಗೀ ಸಮಸ್ಯೆಯು ಪುರಾಕೃತ ದುಷ್ಕರ್ಮಫಲವಾಗಿ ಏರ್ಪಟ್ಟಿದೆ. ಕಾಮನೆಯಿಂದಾಗಲೀ ದ್ರವ್ಯಲೋಭದಿಂದಾಗಲೀ ಸ್ವಕುಲ ಧರ್ಮವನ್ನು ತ್ಯಜಿಸಿ ಅಧರ್ಮವಶವಾಗುವವರು ತಪ್ಪದೆ ನರಕವನ್ನು ಹೊಂದುವರು', ಎಂದು ಹೇಳಿದರು.

ಆಗ ಇನ್ನುಳಿದ ಕೆಲವು ನಗರಸ್ವಾಮಿಗಳು, 'ಕನ್ಯೆಯನ್ನು ರಾಜನಿಗೆ ವಿವಾಹ ಮಾಡಿಕೊಡುವುದು ಅಧರ್ಮವಲ್ಲ. ಈ ವಿವಾಹದಿಂದ ವೈಶ್ಯಜಾತಿಗೆ ವಿಶೇಷ ಶುಭವುಂಟಾಗಬಲ್ಲದು. ನಾವು ಇದಕ್ಕೆ ಅಂಗೀಕರಿಸದ ಪಕ್ಷದಲ್ಲಿ ಬಲಶಾಲಿಯಾದ ಚಕ್ರವರ್ತಿಯ ವಿರೋಧವು ಸಂಭವಿಸುವುದು. ನಮ್ಮ ಕುಲಕ್ಕೆ ಆಪತ್ತುಗಳುಂಟಾಗುವವು', ಎಂದು ನುಡಿದರು.

ಆಗ ತೇಜಶ್ಯಾಲಿಯಾದ ಮಾಧವಶ್ರೇಷ್ಠಿ ಮೊದಲಾದ ನಗರಸ್ವಾಮಿಗಳು ನಿಂತು, 'ರಾಜನಿಗೆ ಕನ್ಯೆಯನ್ನು ಕೊಡದಿದ್ದರೆ ನಮಗೆ ಪ್ರಮಾದವುಂಟಾಗುವುದೆಂದು ಭೀತರಾಗಬೇಕಾದ ಅವಶ್ಯಕತೆಯಿಲ್ಲ. ನಮ್ಮಿಂದಲೇ ಈ ಭೂಮಿ, ಪಟ್ಟಣಗಳು, ದೇಶ ಸುಭಿಕ್ಷವಾಗಿವೆ. ನಮ್ಮೊಡನೆ ವಿರೋಧಮಾಡುತ್ತ ಯಾವ ಪ್ರಭುತ್ವವಾದರೂ ಮುಂದೆ ಸಾಗಲಾರದು. ದೇಶದ ಸೌಭಾಗ್ಯ ಸಂಪದಗಳಿಗೆ ಪ್ರಧಾನಾಧಾರಗಳಾದ ಕೃಷಿ, ಗೋರಕ್ಷಣೆ, ವಾಣಿಜ್ಯಗಳನ್ನು ನಿರ್ವಹಿಸುವ ವೈಶ್ಯರನ್ನು ನಿರ್ಲಕ್ಷ್ಯಮಾಡಿದರೆ ಯಾವ ಪ್ರಭುತ್ವವಾದರೂ ಕೊನೆಗಾಣುವುದು ತಪ್ಪದು. ನಾವು ಏಕೆ ಭಯಪಡಬೇಕು? ಅದೂ ಅಲ್ಲದೆ ಪರಾಶರಸ್ಮೃತಿಯನ್ನು ಅನುಸರಿಸಿ ಈ ಕಲಿಯುಗದಲ್ಲಿ ವರ್ಣಾಂತರ ವಿವಾಹಗಳು ನಿಷಿದ್ಧವಲ್ಲವೇ?', ಎಂದು ಆವೇಶಪೂರಿತರಾಗಿ ನುಡಿದರು.

ಆಗ ಕುಲಗುರುಗಳಾದ ಭಾಸ್ಕರಾಚಾರ್ಯರು ಎದ್ದು ನಿಂತು, 'ಸಭಾಸದರೇ ! ವರ್ಣಾಂತರ ವಿವಾಹವು ಧರ್ಮಬದ್ಧವೋ? ಇಲ್ಲಧರ್ಮವಿರೋಧವೋ? ಎಂಬುದು ಈಗ ನಮ್ಮ ಸಮಸ್ಯಯಲ್ಲ. ನಮ್ಮ ರಾಜಕುಮಾರಿ ವಾಸವಿ ಕನ್ಯಕೆಯು ಗೌರವಬಾಲಿಕೆ. ಆಕೆಯು ದಿವ್ಯಗುಣ ಸಮುಪೇತಳಾದ ಮಹಾತ್ಮಳು. ನಿರಂತರ ನಿವೃತ್ತಿಮಾರ್ಗದಲ್ಲಿ ಸಂಚರಿಸುತ್ತಿರುವ ಭಕ್ತಳು. ಗೌರವಬಾಲಿಕೆಯಾದ ಕನ್ಯಕೆಯನ್ನು ಬಾಲನಗರನಲ್ಲದ ವೈಶ್ಯಬಾಲಕನಿಗಾದರೂ ಕೊಟ್ಟು ವಿವಾಹ ಮಾಡಕೂಡದೆಂಬ ಕಟ್ಟುಪಾಡು ನಮಗಿದೆಯಲ್ಲವೇ?; ಎಂದು ಹೇಳಿದರು. ಆ ಮಾತುಗಳನ್ನು ಕೇಳಿದ ತಿಪ್ಪಯಾರ್ಯಾದಿ ನಗರಸ್ವಾಮಿಗಳು ಎದ್ದು ನಿಂತು, 'ಆಚಾರ್ಯವರ್ಯಾ ! ಈ ಕಟ್ಟಳೆಗಳನ್ನು ನಾವೇ ಅಲ್ಲವೆ ಕಲ್ಪಿಸಿಕೊಂಡಿರುವುದು?

ಪರಿಸ್ಥಿತಿಗಳನ್ನು ಅನುಸರಿಸಿ ಅವುಗಳನ್ನು ಬದಲಿಸಿಕೊಂಡರೆ ಯಾವ ತೊಂದರೆಯೂ ಉಂಟಾಗದು. ಸಾರ್ವಭೌಮನು ಕಡುಬಲವಂತನು, ಅವನು ನಮ್ಮ ಮೇಲೆ ದಂಡೆತ್ತಿ ನಮ್ಮ ಕನ್ಯೆಯನ್ನು ಬಲವಂತವಾಗಿ ಪರಿಣಯವಾಗಲು ಎಣಿಸಿದರೆ ನಾವು ಮಾಡಬಲ್ಲೆವಾದರೂ ಏನು?", ಎಂದು ಭಯವನ್ನು ವ್ಯಕ್ತಪಡಿಸುತ್ತ ಪ್ರಶ್ನಿಸಿದರು.

ಥಟ್ಟನೇ ಕೆಲವರು ವೈಶ್ಯಪ್ರಮುಖರು, "ಸಭಾಸದರೇ ! ಹಿಂದೆ ಸೀತಾದೇವಿಯನ್ನು ಅಪಹರಿಸಿದ ರಾವಣಾಸುರನು ಏನು ಅನುಭವಿಸಿದನು? ದ್ರೌಪದಿಯನ್ನು ಕಾಮಿಸಿದ ಕೀಚಕನೇನಾದನು? ನಳಮಹಾರಾಜನ ಭಾರ್ಯೆಯಾದ ದಮಯಂತಿಯನ್ನು ಬಲಾತ್ಕರಿಸಲು ಹೋದ ದುಷ್ಟ ಕಿರಾತಕನು ಭಸ್ಮವಾಗಿಬಿಡಲಿಲ್ಲವೇ? ನಮ್ಮ ಕನ್ಯಕೆಯನ್ನು ವಾಂಛಿಸಿದ ವಿಷ್ಣುವರ್ಧನನ ಗತಿ ಕೂಡ ಅದೇ ರೀತಿ ಯಾಗುವುದು", ಎಂದು ಹೇಳಿದರು.

ಆಗ ಮಹಾವೀರನೂ, ಸರ್ವಸೈನ್ಯಾಧಿಪತಿಯೂ ಆದ ವಿರೂಪಾಕ್ಷನು ಕ್ರೋಧಾರುಣ ನೇತ್ರನಾಗಿ ಎದ್ದು ನಿಂತು 'ಹಿರಿಯರೇ ! ಸರ್ವಜನರು ತಮ್ಮ ತಮ್ಮ ಜಾತಿಯಲ್ಲಿ ಗುಣಶ್ರೇಷ್ಠನಾದವನಿಗೆ ಕನ್ಯೆಯನ್ನು ಕೊಟ್ಟು ವಿವಾಹಮಾಡುವುದು ಸತ್ಸಂಪ್ರದಾಯವೆಂದೂ, ಸತ್ಪುರುಷರು ಈ ಸಂಪ್ರದಾಯವನ್ನು ತೊರೆಯುವುದಿಲ್ಲವೆಂದು, ಅಕಸ್ಮಾತ್ ತೊರೆದ ಪಕ್ಷದಲ್ಲಿ ಪ್ರಾಯಶ್ಚಿತ್ತಕ್ಕಾಗಿ ಚಾಂದ್ರಾಯಣ ವ್ರತವನ್ನಾಚರಿಸಬೇಕೆಂದು ದ್ವಿಜೋತ್ತಮರು ಹೇಳಿರುವುದನ್ನು ಕೇಳಿದ್ದೇವೆ. ದುರಾಶಾಪರನು, ಕಾಮುಕನು, ಹಿಂಸಾಪ್ರಿಯನು, ಧನಬಲದರ್ಪಯುಕ್ತನು, ಅಧರ್ಮಪರನು ಆದ ಚಕ್ರವರ್ತಿಗೆ ನಮ್ಮ ಕನ್ಯೆಯನ್ನು ನೀಡುವುದು ನಮ್ಮ ಬಾಲನಗರ ಸಂಘಕ್ಕೆ ಆಮೋದಯೋಗ್ಯವಲ್ಲ. ಈ ವಿವಾಹವು ನಡೆಯಲು ಎಂಥ ಪರಿಸ್ಥಿತಿಯಲ್ಲೂ ಸಾಧ್ಯವಿಲ್ಲ', ಎಂದು ಒತ್ತಿ ನುಡಿದನು.

ಅನಂತರ 612 ಗೋತ್ರಜರಾದ ವೈಶ್ಯರಲ್ಲಿ ಮುಖ್ಯನಾದ ತಿಪ್ಪಯ್ಯಶ್ರೇಷ್ಠಿ ಎದ್ದು, 'ಸಭಿಕರೇ! ಈ ವಾದೋಪವಾದಗಳಿಂದ ಪ್ರಯೋಜನವಿಲ್ಲ ವಿವಾಹವು ವ್ಯಕ್ತಿಗತ ವಿಷಯವಲ್ಲವೇ,? ವಿವಾಹವಾಗಬೇಕಾದವಳು ವಾಸವಿ ಕನ್ಯಕೆ. ಆಕೆಯನ್ನೇ ಈ ಸಭೆಗೆ ಕರೆಸಿ, ಆಕೆಯ ಅಭಿಪ್ರಾಯವನ್ನು ತಿಳಿದುಕೊಂಡ ಬಳಿಕ ನಿರ್ಣಯಮಾಡುವುದು ಯುಕ್ತ.

.ಯುವರಾಣಿಯನ್ನು ಸಭೆಗೆ ಕರೆಸಿರಿ', ಎಂದು ಸೂಚಿಸಿದನು.

ಆಗ ಕುಸುಮಶ್ರೇಷ್ಠಿ ಗುರುಗಳ ಅಣತಿಯ ಮೇರೆಗೆ ವಾಸವಿ ಕನ್ಯಕೆಯನ್ನು ಸಭಾಸ್ಥಳಕ್ಕೆ ಕರೆಸಿದನು, ತಂದೆಯ ಆಜ್ಞಾನುಸಾರವಾಗಿ ಕನ್ಯಕೆಯು ಸಭೆಗೆ ಆಗಮಿಸಿದಳು. ಗುರು ಹಿರಿಯರಿಗೆ ನಮಸ್ಕರಿಸಿ ತನ್ನ ಜನಕನ ಪಕ್ಕದಲ್ಲಿ ಆಸೀನಳಾದಳು. ವಾಸವಿ ಕನ್ಯಕೆಯ ಆಗಮನದಿಂದ ಸಭಾಸದರಲ್ಲಿ ಎಣೆಯಿಲ್ಲದ ಆಸಕ್ತಿಯು ಬೆಳೆಯಿತು. ಆಗ ಗುರು ಭಾಸ್ಕರಾಚಾರ್ಯರು, ಆ ಚಕ್ರವರ್ತಿಯು ಪೆನುಗೊಂಡೆಯಿಂದ ಹಿಂದಿರುಗಿದಾಗಿನಿಂದ ನಡೆದೆಲ್ಲ ವೃತ್ತಾಂತವನ್ನೂ ಮತ್ತು ಚರ್ಚಿಸಿದ ವಿಷಯಗಳನ್ನು ಸಭೆಗೆ ಆಗಮಿಸಿದ ವಾಸವಿಕನ್ಯಕೆಗೆ ತಿಳಿಸಿದರು. ಅನಂತರ ತಿಪ್ಪಯಾರ್ಯನು ವಾಸವಿಯನ್ನು ನೋಡ, "ಓ ರಾಜಕುಮಾರಿ ! ನೀನು ಮಹಾವಿವೇಕವಂತಳು. ಚಕ್ರವರ್ತಿಯನ್ನು ಕೈಹಿಡಿಯುವುದರಿಂದ ಆಂಧ್ರ ಸಾಮ್ರಾಜ್ಯಕ್ಕೆ ಪಟ್ಟಮಹಿಷಿಯಾಗಬಲ್ಲೆ. ಸಾರ್ವಭೌಮನಿಂದ ಸಂಭವಿಸಲಿರುವ ಪ್ರಮಾದವನ್ನು ತಪ್ಪಿಸಬಲ್ಲೆ. ಎಲ್ಲವೂ ನಿನ್ನ ಅಂಗೀಕಾರದ ಆಧಾರದ ಮೇಲೆಯೇ ನಿಂತಿದೆ. ಆಲೋಚಿಸಿ, ನಿನ್ನ ಅಭಿಪ್ರಾಯವನ್ನು ತಿಳಿಸಬೇಕಾಗಿದೆ', ಎಂದು ಹೇಳಿದನು. ಆಗ ವಾಸವಿ ಕನ್ಯಕೆಯು ಸಭಾಸದರನ್ನು ನೋಡಿ. 'ದೈವಸ್ವರೂಪರಾದ ಪಿತರುಗಳೇ ! ಪ್ರಿಯ ಸೋದರರೇ ! ವಿವಾಹ ವಿಷಯದಲ್ಲಿ ವ್ಯಕ್ತಿಗಿರುವ ಸ್ವಾತಂತ್ರ್ಯವನ್ನು ಹರಿಸುವ ಅಧಿಕಾರ ಯಾರಿಗೂ ಇಲ್ಲ. ನನ್ನ ಹೃದಯವು ಪರಾಂಬಿಕೆಯ ಪಾದಾರ್ಚನೆಗೆ ಸಮರ್ಪಿತವಾಗಿದೆ. ನನಗೆ ವಿವಾಹೇಚ್ಛೆಯಿಲ್ಲ. ಬ್ರಹ್ಮಚಾರಣಿಯಾಗಿರಲು ನಿಶ್ಚಯಿಸಿಕೊಂಡಿರುವವಳು ನಾನು', ಎಂದು ನುಡಿದಳು.

ಆ ವಚನಗಳನ್ನು ಕೇಳಿ 612 ಗೋತ್ರದವರು ಬಲು ವ್ಯಾಕುಲತೆಯಿಂದ, 'ಕುಮಾರೀ ! ನಿನ್ನ ನಿರ್ಣಯದಿಂದ ಸಮಸ್ತಕುಲಕ್ಕೆ ಕೇಡಾಗುವುದು, ಚಕ್ರವರ್ತಿಯು ಹಗೆ ಸಾಧಿಸಿದರೆ ಕಾಲಸರ್ಪದಂತೆ ಅವನು ತನ್ನ ಬಲದಿಂದಲಾದರೂ ನಿನ್ನನ್ನು ಕೊಂಡೊಯ್ಯಬಲ್ಲನು. ಅಂಥವನನ್ನು ತಡೆಯಬಲ್ಲವರು ಯಾರು?', ಎಂದು ಭೀತಿಕಾರಕವಾಗಿ ಮಾತನಾಡಿದರು ಅವರ ಮಾತುಗಳನ್ನು ಕೇಳಿದ ವಿರೂಪಾಕ್ಷನು ಮರಿನಾಗರನಂತೆ ಸರ್ರನೆ ಎದ್ದು,

'ಓ ಭೀರುಗಳೇ ! ಚಕ್ರವರ್ತಿ ದಂಡೆತ್ತಿ ಬಂದರೆ ಈ ಧರಣೀಚಕ್ರವೇ ತಲೆಕೆಳಗಾಗಿ ಬಿಡಬಲ್ಲದೆಂಬಂತೆ ಮಾತನಾಡುತ್ತಿದ್ದೀರಿ. ಮದಾಂಧನಾಗಿ ಅವನು ನಮ್ಮ ಮೇಲೆರಗಿದರೆ ಪ್ರಾಣಸಹಿತ ಮರಳುವುದು ಕನಸು. ಪ್ರಳಯರುದ್ರನ ಪ್ರಮಥಗಣಗಳಂತಿರುವ ನಮ್ಮ ಬಾಲನಗರ ಸೇನೆಗಳ ಪ್ರಚಂಡ ಶೌರ್ಯಾಗ್ನಿ ಜ್ವಾಲೆಗಳಲ್ಲಿ ಆ ಶತೃಶಲಭಗಳು ಸುಟ್ಟು ಬೂದಿಯಾಗಬಲ್ಲವು. ನನ್ನ ಅಪ್ರತಿಹತ ಖಡ್ಗಧಾರೆಗಳಿಂದ ವೈರಿವೀರರ ಮುಂಡಗಳನ್ನು ಕಡಿದು ಅವುಗಳಿಂದ ಭೀಷಣ ರಣಚಂಡಿಗೆ ಕಪಾಲಮಾಲೆಯನ್ನು ಹೆಣೆದು ಅಲಂಕರಿಸುವೆನು ಎಂದು; ಪ್ರಳಯಕಾಲದ ಪರ್ಜನ್ಯದಂತೆ ಗರ್ಜಿಸಿದನು. ಅದನ್ನು ಕೇಳಿ ಬಾಲನಗರ ಪ್ರತಿನಿಧಿಗಳೆಲ್ಲರು ಅಮಿತೋತ್ಸಾಹ ಪೂರಿತರಾಗಿ ಸಮರರಂಗದಲ್ಲಿ ಶತೃಗಳ ಎದೆಯನ್ನು ಸೀಳಿ ಚೆಂಡಾಡುವೆವೆಂದು ಕತ್ತಿಗಳನ್ನು ಝುಳಪಿಸಿದರು. ಆಗ ಕುಸುಮಾರ್ಯನು ಎದ್ದು, 'ಗುರುಬಾಲವೃದ್ಧಾದಿಗಳೇ ! ನಾವು ಅಹಿಂಸಾಪ್ರಿಯರೇ ಹೊರತು ಬಲಹೀನರಲ್ಲ. ಆ ದುಷ್ಟ ರಾಜೇಂದ್ರನನ್ನು ತುಳಿದು ವಾಸವಿಯನ್ನು ರಕ್ಷಿಸಿಕೊಳ್ಳಬಲ್ಲೆವು', ಎಂದು ಕ್ರೋಧದಿಂದ ನುಡಿದನು.

ವಾಸವಿ ಕನ್ಯಕೆಯು ತ್ಯಾಗಾಹಿಂಸೆಗಳಿಂದ ಅಧರ್ಮದುಷ್ಟತ್ವಗಳನ್ನು ಕೊನೆಗಾಣಿಸುವ ನೂತನ ವಿಧಾನವನ್ನು ಸಭಾಸದರಿಗೆ ಬೋಧಿಸುವುದು:

ಕೂಡಲೇ ವಾಸವಿ ಕನ್ಯಕೆಯು ಎದ್ದುನಿಂತು, ತಂದೆಯವರೇ ! ಆರ್ಯರೇ ! ದುಷ್ಟತ್ವವನ್ನು ಶಿಕ್ಷಿಸುವ ನೆಪದಲ್ಲಿ ಸಮರಗಳನ್ನು ನಡೆಸಿ, ದಾರುಣ ಮಾರಣಕಾಂಡಗಳನ್ನು ನಡೆಸಿ ಪ್ರಪಂಚದಲ್ಲಿ ಈರ್ಷ್ಯಾದ್ವೇಷಗಳನ್ನು ಭಯಂಕರ ರಕ್ತದಾಹವನ್ನು ಬೆಳೆಸಿದರೇ ಹೊರತು ಯುದ್ಧೋನ್ಮಾದರು ಇಲ್ಲಿಯತನಕ ಸಾಧಿಸಿದ ಫಲಿತಗಳೇನಿವೆ? ಒಬ್ಬರ ಸ್ವಾರ್ಥಕ್ಕಾಗಿ ಎಣಿಸ ಲಾಗದಷ್ಟು ಜನರು ಬಲಿಯಾಗುವರು. ಎಲ್ಲಿ ನೋಡಿದರೂ ಭೀತಿ, ಅಶಾಂತಿ, ಆಕ್ರಂದನಗಳು ತುಂಬಿ ಹೋಗುವುದು. ಇಷ್ಟೆ ಅಲ್ಲವೇ? ನನ್ನ ರಕ್ಷಣೆಗಾಗಿ ಯುದ್ಧನಡೆಯುವುದನ್ನು ನಾನು ಅಂಗೀಕರಿಸುವದಿಲ್ಲ. ಶಾಂತಿ ಅಹಿಂಸೆಗಳಿಗೆ ನೆಲೆಯಾಗಿರುವ ವೈಶ್ಯಕುಲಕ್ಕೆ ಈ ದಾರುಣ

ರಣಾಸಕ್ತಿಯು ವಾಂಛನೀಯವಲ್ಲ. ನೀವೆಲ್ಲರೂ ಶಾಂತರಾಗಿರಿ,' ಎಂದು ಗಂಭೀರವಾಗಿ ನುಡಿದಳು.

ವಾಸವಿಯ ನುಡಿಗಳನ್ನು ಆಲಿಸಿದ ಕುಸುಮಶ್ರೇಷ್ಠಿಯು, 'ಕುಮಾರಿ ! ಯುದ್ಧದ ಹೊರತು ಈ ಸಮಸ್ಯೆಯು ಯಾವ ವಿಧದಲ್ಲಿ ಬಗೆಹರಿಯಬಲ್ಲದು?; ಎಂದು ಪ್ರಶ್ನಿಸಿದನು. ನಂತರ ಕನ್ಯಕೆಯು, 'ತಂದೆ ! ಶಾಂತಿ, ಅಹಿಂಸೆ, ತ್ಯಾಗಗಳಿಂದ ಪರಮಕ್ರೂರಿಗಳನ್ನಾದರೂ ಜಯಿಸಬಹುದು. ಅತಿಬಲವಂತರಾಗಿದ್ದೂ ದುಷ್ಟರಾದ ಶತೃಗಳನ್ನು ಸಾಯಿಸದೆ ಅವರಲ್ಲಿಯ ದುಷ್ಟತ್ವವನ್ನು ನಾಶಗೊಳಿಸಲು ಬಯಸಿ ಅವರ ದುಶ್ಚರ್ಯೆಗಳನ್ನು ಬಡಿದೋಡಿಸಿ, ನಾವೇ ಕಷ್ಟನಷ್ಟಗಳನ್ನು ಸಹಿಸುತ್ತ ಅಗತ್ಯವಾದಲ್ಲಿ ಆತ್ಮಾರ್ಪಣ್ ಮಾಡುವುದಕ್ಕಾದರೂ ಸಿದ್ಧರಾದಾಗ ಶತೃವು ಎಂಥಾ ಕಠಿಣಾತ್ಮನಾದರೂ ಅವನ ಹೃದಯವು ಕರಗಿ ನೀರಾಗದಿರದು. ಆಗ ಅವನಲ್ಲಿಯ ದುಷ್ಟತ್ವವು ಅಂತ್ಯಗೊಂಡು ಶಿಷ್ಟತ್ವವು ಹೊಳೆಯಬಲ್ಲದು. ಈ ಫಲಿತವು ಶಾಶ್ವತವಾದುದು. ಇದೇ ಕಲಿಯುಗದಲ್ಲಿ ಅಧರ್ಮವನ್ನು ಅಡಗಿಸಿ ಧರ್ಮವನ್ನು ಪ್ರತಿಷ್ಠಿಸುವುದಕ್ಕೆ ಅನುಸರಣೀಯವಾದ ನೂತನ ವಿಧಾನವಾಗಿದೆ. ಈ ವಿಧಾನವೇ ಇಂದಿನ ಪ್ರಪಂಚಕ್ಕೆ ಆಚರಣೀಯವಾದ್ದರಿಂದ ದುಷ್ಟ ಸಾರ್ವಭೌಮನ ನಿರಂಕುಶತ್ವಕ್ಕೆ ತಿರಸ್ಕಾರವನ್ನು ತಿಳಿಸುತ್ತಾ ಅಗ್ನಿಪ್ರವೇಶವನ್ನು ಮಾಡುವೆನು. ಅದರಿಂದ ಆ ರಾಜೇಂದ್ರನ ತುಚ್ಛವಾಂಛೆಯೂ, ರಣವೂ, ಮಾರಣವೂ ತಪ್ಪಿಹೋಗಬಲ್ಲವು; ಎಂದು ಗಂಭೀರವಾಗಿ ನುಡಿದು ಜಾಗೃತಿ ಮೂಡಿಸಿದಳು.

ಅನಂತರ 16 ಗೋತ್ರದವರು ಕನ್ಯಕೆಯೊಡನೆ, 'ಅಮ್ಮಾವಾಸವಿ! ಸಾರ್ವಭೌಮನ ಹೃದಯವು ಅಷ್ಟೊಂದು ಸುಲಭವಾಗಿ ಕರಗಿ ನೀರಾಗುವಂಥಹುದಲ್ಲ. ಅವನು ಅಮಿತ ಸೈನ್ಯದೊಡನೆ ನಮ್ಮ ಮೇಲೆ ದಂಡೆತ್ತಿ ಬರಬಲ್ಲನು', ಎಂದು ಹೆದರಿಸಿದರು. ಕೂಡಲೇವಾಸವಿ 'ಓ ವೈಶ್ಯಪ್ರಮುಖರೇ ! ನಮ್ಮವರು ಆತ್ಮರಕ್ಷಣೆ ಮಾಡಿಕೊಳ್ಳಲಾರದ ಅಸಮರ್ಥರಲ್ಲ. **ನನ್ನೀ ಆದರ್ಶಮಾರ್ಗವು ಬಲಶಾಲಿಗಳಾದ ತ್ಯಾಗಧನರಿಗೆ ಮಾತ್ರವೇ ಅನುಸರಣೀಯವಲ್ಲದೇ ಬಲಹೀನರಾದ ಹೇಡಿಗಳಿಗಲ್ಲ.** ಅಂಥ ಬಲಹೀನರಿಗೂ ಅಂಜುಬುರುಕರಿಗೂ

ಎಂದಿಗಾದರೂ ಅಪಜಯವು ತಪ್ಪದಲ್ಲವೇ? ದುಷ್ಟ ಚಕ್ರವರ್ತಿಯು ಮಾನವನಲ್ಲದೆ ದಾನವನೇ ಆದರೂ ಅವನು ನಮ್ಮನ್ನೇನೂ ಮಾಡಲಾರನು. ಅವನ ದುರುಳುತನವನ್ನು ಕಂಡ ನಮ್ಮವರೆಲ್ಲರೂ ಅವನನ್ನು ನಿಂದಿಸುವರು. ಅವನ ಅಧರ್ಮಪರಿಪಾಲನೆಯನ್ನು ಸಹಿಸುವುದಿಲ್ಲ. ಅವನನ್ನು ನಿಂದಿಸುವರು. ಅವನ ಅಧರ್ಮಪರಿಪಾಲನೆಯನ್ನು ಸಹಿಸುವುದಿಲ್ಲ. ಅವನಿಗೆ ಸಹಕರಿಸುವುದಿಲ್ಲ. ಹಾಗಾದರೆ ಆ ಮಹಾರಾಜನೊಬ್ಬನೇ ದಿಕ್ಕಿಲ್ಲದವನಾಗಿ ಚಿಂತಾಕ್ರಾಂತನಾಗಿ ಅಂತ್ಯಗಾಣದೆ ತಪ್ಪದು; ಎಂದು ಮೇಘಗಂಭೀರ ಸ್ವರದಲ್ಲಿ ನುಡಿಗಳನ್ನಾಡಿದಳು. ವಾಸವಿ ಕನ್ಯಕೆಯ ವಚನಗಳು ಮಹಾಮಂತ್ರಗಳಂತೆ ವಿವೇಕವಂತರನ್ನು ಪ್ರಭಾವಿತರನ್ನಾಗಿ ಮಾಡಿದವು.

## ಆತ್ಮಾರ್ಪಣಕ್ಕೆ ಸಂಸಿದ್ಧರಾದ 102 ಗೋತ್ರದವರು:
## ಬಿಟ್ಟು ಹೋಗಲು ಸನ್ನದ್ಧರಾದ 612 ಗೋತ್ರದವರು:

ಆನಂತರ ಕುಸುಮಶ್ರೇಷ್ಠಿಯು ಸಭೆಯನ್ನುದ್ದೇಶಿಸಿ ಅಭಿಮಾನಧನರಾದ, 'ಆತ್ಮೀಯರೇ! ವ್ಯಕ್ತಿಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕೂ, ನಿರಂಕುಶತ್ವವನ್ನು ಧಿಕ್ಕರಿಸುವುದಕ್ಕೂ. ಅಧರ್ಮವನ್ನು ಅಂತ್ಯಗೊಳಿಸುವುದಕ್ಕೂ ನಾನು ಕೂಡ ಸತೀಸಮೇತನಾಗಿ ನನ್ನ ಪುತ್ರಿಯೊಡಗೂಡಿ, ಆತ್ಮಬಲಿದಾನ ಮಾಡಿಕೊಳ್ಳುವೆನು. ನನಗೆ ಅನುಮತಿ ನೀಡಿ; ಎಂದು ಬೇಡಿಕೊಂಡನು. ಆ ಮಾತುಗಳನ್ನು ಕೇಳಿ ಕುಸುಮಾರ್ಯನ ಬಂಧುಗಳಾದ 102 ಗೋತ್ರದವರು ಕುಲಧರ್ಮಗಳ ಸಂರಕ್ಷಣೆಗಾಗಿ ನಾವೂ ಕೂಡ ಅಗ್ನಿಯಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವೆವೆಂದು ಅದ್ಭುತ ತ್ಯಾಗಮೂರ್ತಿಗಳಾಗಿ ಪ್ರಕಟಿಸಿದರು.

ಹೀಗೆ ದೃಢಚಿತ್ತರಾಗಿ ನುಡಿದ 102 ಗೋತ್ರಗಳ ವೈಶ್ಯರ ನುಡಿಗಳನ್ನು ಕೇಳಿ 612 ಗೋತ್ರಗಳ ವೈಶ್ಯರು ಭೀತಚಿತ್ತರಾಗಿ, ' ಓಹೋ ! ವಂಶಗೌರವವನ್ನು ಕಾಪಾಡಿಕೊಳ್ಳುವುದಕ್ಕೆಂದು ನೀವು ಭ್ರಮೆಯಿಂದ ವಂಶಕ್ಷಯಕ್ಕೆ ತೊಡಗುತ್ತಿದ್ದೀರಿ. ಆತ್ಮಾಹುತಿ ಎಂಬ ಹೆಸರಿನಲ್ಲಿ ನೀವು ನಡೆಸಿಕೊಳ್ಳುತ್ತಿರುವ 'ಆತ್ಮಹತ್ಯೆ' ಯಲ್ಲಿ ನಾವು ಪಾಲ್ಗೊಳ್ಳುವುದಿಲ್ಲ. ಆತ್ಮಹತ್ಯೆಯು ಮಹಾಪಾತಕ ಹೇತುವಾಗಿದೆ. ಕೀರ್ತಿಯನ್ನಾಗಲೀ ಅಪಕೀರ್ತಿಯನ್ನಾಗಲೀ ಜೀವಿಸಿರುವಾಗಲೇ ನೋಡಬಲ್ಲೆವು. ಸತ್ತು ಸಾಧಿಸುವುದೇನಿರುವುದು? ನೀವು

ಅವಿವೇಕದಿಂದ ವಂಶನಾಶಕ್ಕಾಗಿಯೇ ಎಣಿಸಿಕೊಂಡರೆ ನಮ್ಮ ಪರಸ್ಪರ ಬಂಧುತ್ವಗಳು ಇನ್ನು ನಿಲ್ಲುವುದಿಲ್ಲ. ಇನ್ನು ನಿಮಗೂ ನಮಗೂ ಯಾವ ಬಗೆಯ ಸಂಬಂಧಬಾಂಧವ್ಯಗಳೂ ಇರುವುದಿಲ್ಲ', ಎಂದು ನಿಷ್ಠುರಮತಿಗಳಾಗಿ ನುಡಿದರು.

ಕ್ರೋಧಾರುಣನೇತ್ರರಾಗಿ ಮಾತುಮಾತಿಗೂ ದುರ್ವಾದ ಮಾಡುತ್ತಾ, ಸ್ವಕುಲಾಭಿಮಾನ ಶೂನ್ಯರಾಗಿ ಪ್ರಲಾಪಿಸುತ್ತಿದ್ದ 612 ಗೋತ್ರದವರ ಇಂಥ ಅಸಹ್ಯಕರವಾದ ಮಾತುಗಳನ್ನು ಕೇಳಿ ಅವರೊಡನೆ 102 ಗೋತ್ರದವರು, ಓ ಸ್ವಾರ್ಥಪರರೇ! ನಿಮ್ಮ ಮಾತುಗಳನ್ನು ಕೇಳಿ ನಾವು ಕನ್ಯಕೆಯನ್ನು ವಿಷ್ಣುವರ್ಧನನಿಗೆ ಕೊಡುವುದಿಲ್ಲ. ನಿಮಗೂ ನಮಗೂ ಸಂಬಂಧವು ಆಗದು. ನಮ್ಮೊಡಗೂಡಿ ಬಾಳುವುದಕ್ಕೆ ನೀವು ತಕ್ಕವರಲ್ಲ ಇನ್ನು ಯಥೇಚ್ಛವಾಗಿ ನಮ್ಮ ರಾಜ್ಯವನ್ನು ತೊರೆದು ಹೋಗಬಹುದು; ಎಂದು ಶಾಸಿಸಿದರು.

612 ಗೋತ್ರದವರು ಸಭಾಮಂಟಪವನ್ನು ತೊರೆದು ಹೊರಗೆ ಬಂದು ಗುಂಪುಗಳಾಗಿ ಕೂಡಿ ಈ 102 ಗೋತ್ರಜ ವೈಶ್ಯರು ಎಷ್ಟು ಮೂರ್ಖರಾಗಿರುವರು, ಇಷ್ಟೆಲ್ಲಾ ಅನರ್ಥಕ್ಕೆ ಕಾರಣವಾಗಿರುವವಳು ಆ ವಾಸವಿ ಕನ್ಯಕೆಯೇ ಅಲ್ಲವೇ? ಕೃತಯುಗದಲ್ಲಿ ಕ್ಷತ್ರಿಯ ಕುಲನಾಶಕನಾದ ಪರಶುರಾಮನಿಗೆ ಜನ್ಮವಿತ್ತ ರೇಣುಕಾದೇವಿಯಂತೆ, ತ್ರೇತಾಯುಗದಲ್ಲಿ ರಾಕ್ಷಸವಿಧ್ವಂಸಕ್ಕಾಗಿ ಕಾರಣಭೂತಳಾದ ಜಾನಕಿಯಂತೆ, ದ್ವಾಪರಯುಗದಲ್ಲಿ ಕೌರವ ವಂಶಕ್ಷಯಕ್ಕೆ ಕಾರಣಳಾದ ದ್ರೌಪದಿಯಂತೆ ಈ ಕಲಿಯುಗದಲ್ಲಿ ವೈಶ್ಯ ವಂಶಾರ್ಣವದಲ್ಲಿ ಈ ವಾಸವಿ ಕನ್ಯಕೆಯು ಬಡಬಾಗ್ನಿ ಜ್ವಾಲೆಯಾಗಿ ಜನ್ಮಿಸಿರುವಳು. ಓರ್ವ ವಾಸವಿ ಕನ್ಯಕೆಯು ಅಂತ್ಯಗೊಂಡ ಮಾತ್ರಕ್ಕೆ ಕುಲಗೋತ್ರಗಳಿಗಾವ ಲೋಪವೂ ಉಂಟಾಗದು. ಆಕೆ ಮರಣಿಸಿದ ನಂತರ ಚಕ್ರವರ್ತಿಯು ವಿಜೃಂಭಿಸಿ ತಪ್ಪದೇ ವೈಶ್ಯ ಕುಲ ನಿರ್ಮೂಲನ ಮಾಡಬಲ್ಲನು. ಜೀವಿಸಿದ್ದರೆ ಸುಖಗಳನ್ನು ಅನುಭವಿಸಬಹುದು. ಸುವಿಶಾಲವಾದ ಭಾರತಾವನಿಯಲ್ಲಿ ಎಲ್ಲಿಗಾದರೂ ಹೋಗಿ ಹಾಯಾಗಿ ಜೀವಿಸಬಲ್ಲೆವು ಎಂದು ನುಡಿಯುತ್ತಾ ಒಬ್ಬೊಬ್ಬರಾಗಿ ಆ ಪಟ್ಟಣವನ್ನು ಬಿಟ್ಟುಹೋದರು.

ಕುಸುಮಶ್ರೇಷ್ಠಿ ಸಭೆಯನ್ನು ಮುಕ್ತಾಯಗೊಳಿಸಿ ನಗರೇಶ್ವರಸ್ವಾಮಿಗೆ ನಮಸ್ಕರಿಸಿ ಪುತ್ರಪುತ್ರಿಕೆಯರೊಡನೆ ಸ್ವಗೃಹಕ್ಕೆ ತೆರಳಿದನು. ಮಿಕ್ಕ ವೈಶ್ಯಶ್ರೇಷ್ಠರೆಲ್ಲರೂ ತಮಗೆ ಪ್ರಾಪ್ತಿಯಾಗಲಿರುವ ಅನಂತ ಪುಣ್ಯಕೀರ್ತಿಗಳನ್ನು ಕುರಿತು ಅಲೋಚಿಸುತ್ತಾ ತಮ್ಮ ತಮ್ಮ ಸ್ವಸ್ಥಾನಗಳಿಗೆ ಹಿಂದಿರುಗಿದರು